ದಯಮಾಡಿ ತಾವು ತಿಳಿಸಬೇಕು. ಮತ್ತೆ ಅಲ್ಲಿ ಅಪ್ರಾಮಾಣಿಕ ಅಧಿಕಾರಿಗಳು ಏನಿದ್ದಾರೆ ಅವರೇ ಸುಳ್ಳು ಅರ್ಜಿಗಳನ್ನು ಸೃಷ್ಟಿ ಮಾಡಿ ಅಧಿಕಾರಿಗಳಿಂದ ಮತ್ತು ಇತರೆಯವರಿಂದ ಹಣವನ್ನು ಬಹಳ ವಸೂಲಿ ಮಾಡುತ್ತಿದ್ದಾರೆ ಎನ್ನತಕ್ಕಂಥ ಆರೋಪ ಇದೆ. ಇದು ಬಹಳ ಗಂಭೀರವಾದ ಆರೋಪ. ಅವರೇ ಸುಳ್ಳು ಅರ್ಜಿಗಳನ್ನು ಸೃಷ್ಟಿಮಾಡುವುದು. ಅಧಿಕಾರಿಗಳ ಹತ್ತಿರ ಹೋಗಿ ಹಣ ವಸೂಲಿ ಮಾಡತಕ್ಕಂಥಾದ್ದು ಈ ವಿಷಯ ನಿಜವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ದಯಮಾಡಿ ತಾವು ತಿಳಿಸಬೇಕೆಂದು ಕೋರುತ್ತೇನೆ. ಮತ್ತೆ ಸ್ವಚ್ಛ ಸರ್ಕಾರ ಕೊಡಬೇಕು ಎನ್ನತಕ್ಕಂಥ ವಿಶ್ವಾಸ ಸರ್ಕಾರಕ್ಕೆ ಇದ್ದರೆ ಕರ್ನಾಟಕ ಲೋಕಾಯುಕ್ತದ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಸರ್ಕಾರ ಏನಾದರೂ ಧೃಢನಿರ್ಧಾರಗಳನ್ನು ಕೈಗೊಳ್ಳುತ್ತದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಬಹಳ ಗಂಭೀರವಾದ ವಿಚಾರಗಳನ್ನು ಹೇಳಿದ್ದಾರೆ. ಇದು ಪರಿಶೀಲನೆಗೆ ಯೋಗ್ಯವಾದುದು ಮತ್ತು ಗಂಭೀರವಾಗಿ ವಿಚಾರಮಾಡಬೇಕಾಗುತ್ತದೆ. ಈ ಲೋಕಾಯುಕ್ತವನ್ನು ಬಲಪಡಿಸಲಿಕ್ಕೆ ಏನಾದರೂ ಆಡಳಿತಾತ್ಮಕವಾದಂತಹ ತೊಂದರೆ ಇದ್ದರೆ ಲೋಕಾಯುಕ್ತರ ಜೊತೆಯಲ್ಲಿ ಅಲ್ಲಿರತಕ್ಕಂಥ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ಜೊತೆಯಲ್ಲಿಯೂ ಕೂಡ ಮಾತನಾಡುತ್ತೇನೆ. ನಮ್ಮ ಸರ್ಕಾರದ ಉದ್ದೇಶ ಬಹಳ ಸ್ಪಷ್ಟ ಇದೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು ಮತ್ತು ಸರಿಯಾದಂತಹ ಒಂದು ನಿರ್ಮಲವಾದಂತಹ ಆಡಳಿತವನ್ನು ಜನಗಳಿಗೆ ಕೊಡಬೇಕು ಎನ್ನುವಂಥ ಒಂದು ಉದ್ದೇಶ ನಮಗಿದೆ. ಆ ಉದ್ದೇಶಕ್ಕೆ ನಾವು ಕಟಿಬದ್ಧರಾಗಿದ್ದೇವೆ. ಅದರದೃಷ್ಟಿಯಲ್ಲಿ ಹೋಗಲಿಕ್ಕೆ ಲೋಕಾಯುಕ್ತ ಪೂರಕವಾದಂತಹ ಕೆಲಸ ಬಹಳ ಹೆಚ್ಚಾಗಿ ಮಾಡಬೇಕಾಗಿದೆ. ಜನಗಳಲ್ಲಿ ಭಯ ಇರಬೇಕಾಗುತ್ತದೆ ಮತ್ತು ಅದಕ್ಕೆ ಸರಿಯಾದಂತಹ ಒಂದು ದೃಷ್ಟಿಯಲ್ಲಿ ನಾವು ಹೋಗಬೇಕಾಗುತ್ತದೆ. ಆದ್ದರಿಂದ ತಾವು ಹೇಳಿದಂತಹ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಲೋಕಾಯುಕ್ತವನ್ನು ಬಲಪಡಿಸಲಿಕ್ಕೆ ಅಥವಾ ಅದಕ್ಕೆ ಬೇಕಾಗಿರತಕ್ಕಂಥ ಸ್ಟ್ರಕ್ಚರಲ್ ಚೇಂಜಸ್ ಏನಾದರೂ ಅವಶ್ಯಕತೆ ಇದ್ದರೆ ಅದರ ಬಗ್ಗೆ ಕೂಡ ನಾವು ಪ್ರತ್ಯೇಕವಾಗಿ ಲೋಕಾಯುಕ್ತರ ಜೊತೆಯಲ್ಲಿ ಮಾತನಾಡುತ್ತೇವೆ. ಕಾನೂನು ಪಂಡಿತರ ಜೊತೆಯಲ್ಲಿ ಕೂಡ ಮಾತನಾಡಿಕೊಂಡು ಅನೇಕ ವರ್ಷಗಳ ಒಂದು ಅನುಭವದಿಂದ ಲೋಕಾಯುಕ್ತ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಕಾನೂನು ತಡೆ ಅಥವಾ ಅದರ ಸ್ಟ್ರಕ್ಚರಲ್ ಚೇಂಜಸ್ನಲ್ಲಿ ಏನಾದರೂ ಬದಲಾವಣೆಯಾಗಬೇಕಾದಂತಹ ಪರಿಸ್ಥಿತಿ ಬಂದರೆ ಅದನ್ನು ಸರಿ ಮಾಡುತ್ತೇವೆ ಒಟ್ಟು ಅಭಿಪ್ರಾಯದಲ್ಲಿ ಲೋಕಾಯುಕ್ತವನ್ನು ಹೆಚ್ಚುಬಲಪಡಿಸಿ ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡಲಿಕ್ಕೆ ಬೇಕಾದಂತಹ ಎಲ್ಲಾ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ಮಲೆನಾಡು ಅಭಿವೃದ್ಧಿ ಯೋಜನೆಗೆ ಬಿಡುಗಡೆ ಮಾಡಿದ ಹಣದ ವಿವರ

287. - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಪರಿಸರ ಮತ್ತು ಜೀವಪರಿಸರ ಶಾಸ್ತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 1992-93 ಹಾಗೂ 1993-94ರಲ್ಲಿ ರಾಜ್ಯದ ಆಯವ್ಯಯದಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಗಳಿಗೆ ಒದಗಿಸಿದ ಹಣವೆಷ್ಟು? ಹಾಗೂ ಈವರೆಗೆ ಸರ್ಕಾರ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು ?

ಆ) ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಜಿಲ್ಲಾವಾರು ಆಡಳಿತಾತ್ಮಕ ಅನುಮತಿ ನೀಡಿದ ಕಾಮಗಾರಿಗಳು ಯಾವುವು ಮತ್ತು ಅದರ ಅಂದಾಜು ಮೊತ್ತವೆಷ್ಟು ಹಾಗೂ ಪ್ರಗತಿಯೇನು?

ಇ) ಮಲೆನಾಡು ಅಭಿವೃದ್ಧಿ ಕಾಮಗಾರಿಗಳಿಗೆ 1994ರ ಮಾರ್ಚ್ ಅಂತ್ಯದವರೆಗೆ ಎಷ್ಟು ಹಣ ಬಿಡುಗಡೆ ಮಾಡಲು ಸರ್ಕಾರ ನಿರ್ಣಯಿಸಿರುತ್ತದೆ ಹಾಗೂ ಯಾವಾಗ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.)

ಅ) ನಿಗದಿಪಡಿಸಿದ ಹಣ

ವರ್ಷ	ಕೋಟಿ ರೂ.ಗಳಲ್ಲಿ
1991-92	10.00 ಕೋಟಿ ರೂ.
1992-93	35.00
1993-94	33.00

ಬಿಡುಗಡೆಯಾದ ಮೊತ್ತ

ವರ್ಷ	ಕೋಟಿ ರೂ.ಗಳಲ್ಲಿ
1991-92	10.00 ಕೋಟಿ ರೂ.
1992-93	-
1993-94	20.00 ಕೋಟಿ ರೂ.

ಮಲೆನಾಡು ಅಭಿವೃದ್ಧಿ ಮಂಡಳಿಯು ಇದುವರೆಗೂ ಜಿಲ್ಲಾಧಿಕಾರಿಗಳಿಗೆ 9.2 ಕೋಟಿ ರೂ.ಗಳನ್ನು, ಕಾಮಗಾರಿಗಳನ್ನು ತೆಗೆದುಕೊಳ್ಳಲು ಬಿಡುಗಡೆ ಮಾಡಿದೆ.

ಆ) 2188 (ವಿವರಗಳನ್ನು ಲಗತ್ತಿಸಿದೆ)

ರಸ್ತೆಗಳು ಸೇತುವೆಗಳು, ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ಕುಡಿಯುವ ನೀರು ಪೂರೈಕೆ ಯೋಜನೆಗಳು ಇತ್ಯಾದಿ ಇದರ ಒಟ್ಟು ಅಂದಾಜು ಮೊತ್ತ 40.00 ಕೋಟಿ ರೂ.ಗಳಿರುತ್ತದೆ. ಮತ್ತು ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ.

ಇ) ಈಗಾಗಲೇ ಸರ್ಕಾರವು 20.00 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದು ಸಂಪನ್ಮೂಲಗಳನ್ನು ಅವಲಂಬಿಸಿ, ಉಳಿದ ಹಣವನ್ನು 94 ಮಾರ್ಚ್ 31ರ ಒಳಗೆ ಬಿಡುಗಡೆ ಮಾಡಲು ಉದ್ದೇಶಿಸಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ	ಕಾಮಗಾರಿಗಳ ಸಂಖ್ಯೆ
1.	ಶಿವಮೊಗ್ಗ	405
2.	ಬೆಳಗಾಂ	279
3.	ಉತ್ತರ ಕನ್ನಡ	103
4.	ದಕ್ಷಿಣ ಕನ್ನಡ	172
5.	ಮೈಸೂರು	297
6.	ಹಾಸನ	236
7.	ಕೊಡಗು	100
8.	ಚಿಕ್ಕಮಗಳೂರು	205
9.	ಧಾರವಾಡ	391
	ಒಟ್ಟು	2188

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯನ್ನು 1991-92ರಲ್ಲಿ 1992-93 ಹಾಗೂ 1993-94ರಲ್ಲಿ ಪ್ರಾರಂಭಿಸಿ ಆಯವ್ಯಯದಲ್ಲಿ 78 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ನಾನು ಕೇಳುತ್ತೇನೆ, ಬಿಡುಗಡೆ ಆದ ಹಣ ಎಷ್ಟು? ನಿಗದಿಪಡಿಸಿದ್ದು 78 ಕೋಟಿ 1991-92ರಲ್ಲಿ 10 ಕೋಟಿ 1992-93ರಲ್ಲಿ 35 ಕೋಟಿ, 1993-94ರಲ್ಲಿ 33 ಕೋಟಿ. ಒಟ್ಟು 78 ಕೋಟಿ ನಿಗದಿಪಡಿಸಿದ್ದರೂ 91-92ರಲ್ಲಿ 10ಕೋಟಿ ಮಾತ್ರ ಬಿಡುಗಡೆ ಆಗಿದೆ. 92-93ರಲ್ಲಿ ಬಿಡುಗಡೆ ಆಗಿಲ್ಲ; 93-94ರಲ್ಲಿ 20 ಕೋಟಿ ಮಾತ್ರ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ. ಖರ್ಚು ಎಷ್ಟು ಆಗಿದೆ ಎಂದು ಕೇಳಿದರೆ ಇಲ್ಲಿ ಉತ್ತರ ಇಲ್ಲ ಆದ್ದರಿಂದ ಮಾನ್ಯ ಸಚಿವರು ದಯವಿಟ್ಟು 1991ರಿಂದ ಇಲ್ಲಿಯವರೆಗೆ ಮಲೆನಾಡು ಅಭಿವೃದ್ಧಿಯಲ್ಲಿ ಖರ್ಚಾದ ಹಣ ಎಷ್ಟು? ಏನು ಕೆಲಸ ಮಾಡಲಾಗಿದೆ, ನಿರ್ದಿಷ್ಟವಾಗಿ ಎಷ್ಟು ಹಣ ಕೆಲಸಕ್ಕೆ ವೆಚ್ಚವಾಗಿದೆ ಎನ್ನುವುದನ್ನು ದಯವಿಟ್ಟು ಕೊಡಬೇಕು. ಇದಕ್ಕೆ ಉತ್ತರ ಕೊಡಬೇಕು. ಎರಡನೆಯದಾಗಿ ಈ ಹಣದಲ್ಲಿ ಬಿಡುಗಡೆ ಆಗಿದ್ದು 30 ಕೋಟಿ ಎಂದು ಹೇಳಿದ್ದಾರೆ. ಅದರಲ್ಲಿ ಕೇವಲ 9.2 ಕೋಟಿ ಮಾತ್ರ ಜಿಲ್ಲಾಧಿಕಾರಿಗಳಿಗೆ. ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದರಲ್ಲಿ ಕೇವಲ 9.2 ಕೋಟಿ ಮಾತ್ರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅಂದರೆ ಉಳಿದ ಹಣ ಇನ್ನೂ ಕ್ಯಾಶ್ ಇಲ್ಲ. ಇವರ ಸರ್ಕಾರದಲ್ಲಿ ಎಲ್.ಓ.ಸಿ. ಅಂದ್ರೆ ಕಾಗದದ ಮೇಲೆ ಅನುಮತಿ ಸಿಕ್ಕಿದೆಯೇ ಹೊರತು ಹಣ ಬಿಡುಗಡೆ ಆಗಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಇಲ್ಲಿ 9.2 ಕೋಟಿ ಹಣ ಮಾತ್ರ ಬಿಡುಗಡೆ ಮಾಡಿದ್ದಾರೆ. ಆದರಲ್ಲಿ ಕೆಲಸ ಎಷ್ಟು ಆಗಿದೆ ಅಂದರೆ ಆ ವಿವರ ಕೊಟ್ಟಿಲ್ಲ. 78 ಕೋಟಿಯಲ್ಲಿ ಬಿಡುಗಡೆ ಆಗಿದ್ದು 30 ಕೋಟಿ, ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದು 9.2 ಕೋಟಿ ಅಂದರೆ ಎಷ್ಟು ಹಣ ಈ ದಿವಸಕ್ಕೆ ಅಭಿವೃದ್ಧಿ ಕೆಲಸಕ್ಕೆ ಖರ್ಚಾಗಿದೆ ಎಂದು ನಿರ್ದಿಷ್ಟ ಉತ್ತರ ಕೇಳುತ್ತಿದ್ದೇನೆ. ಆ ನಂತರ ಈ ಒಂದು ಪ್ರೊಸೀಜರ್ ಮಲೆನಾಡು ಅಭಿವೃದ್ಧಿಯಿಂದ ಜಿಲ್ಲಾ ಪರಿಷತ್ತು ಚೀಫ್ ಪ್ಲಾನಿಂಗ್ ಆಫೀಸರ್ ಜಿಲ್ಲಾಧಿಕಾರಿ ಎಕ್ಸಿಕ್ಯೂಟೀವ್ ಇಂಜಿನಿಯರ್, ಈ ಪ್ರೊಸೀಜರ್ ಏನಾದರೂ ಬದಲಾವಣೆ ಮಾಡಿ ನೇರವಾಗಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೀರಾ? ಆ ನಂತರ 20 ಕೋಟಿ ನಿಮ್ಮ ಹತ್ತಿರ ಇದೆ ಎಂದು ಹೇಳಿದಿರಿ. 9.2 ಕೋಟಿ ಜಿಲ್ಲಾಧಿಕಾರಿಗಳಿಗೆ ಕೊಟ್ಟ ನಂತರ ಉಳಿದ ಹಣವನ್ನು ಜಿಲ್ಲಾಧಿಕಾರಿಗಳಿಗೆ ಏತಕ್ಕೆ ಬಿಡುಗಡೆ ಮಾಡಿಲ್ಲವೆಂದು ದಯವಿಟ್ಟು ಈ ವಿವರಗಳನ್ನು ಕೊಡಿ.

12.20 ಪಿ.ಎಂ.

ಶ್ರೀ ಎನ್.ಜಿ. ಹಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, 1992-93ಕ್ಕೆ ಬಜೆಟ್ ಪ್ರಾವಿಜನ್ ಇತ್ತು ಹಣವನ್ನು ಬಿಡುಗಡೆ ಮಾಡಿದ್ದೇವೆ. ಆಗ ಬೋರ್ಡ್ ಕಾನ್ಸ್ಟಿಟ್ಯೂಟ್ ಆಗಿರಲಿಲ್ಲ. ಈಗ 9.2 ಕೋಟಿ ಮತ್ತು 20 ಕೋಟಿ ರೂಪಾಯಿಗಳ ಕೆಲಸಗಳು ನಡೆಯುತ್ತಾ ಇದೆ. ಅದರ ಬಗ್ಗೆ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ವರ್ಕ್ಸ್ ನಡೆಯುತ್ತಾ ಇದೆ ಎಂಬುದನ್ನು ಮತ್ತು ಆಕ್ಷನ್ಪ್ಲಾನ್ ಕೂಡ ಕೊಟ್ಟಿದ್ದೇವೆ. ತಾವುಗಳೇ ಆ ಬೋರ್ಡ್ ಮೆಂಬರ್ಸ್ ಇದ್ದೀರಿ. ತಾವುಗಳು ಒಳ್ಳೆಯ ಸಲಹೆಗಳನ್ನು ಕಳುಹಿಸಿದರೆ ಅದನ್ನೆಲ್ಲಾ ಕಾರ್ಯಗತ ಮಾಡುತ್ತೇವೆ. ಹಾಗೆಯೇ ಮಾರ್ಚ್ ಒಳಗಾಗಿ ಇನ್ನುಳಿದ ಪೂರ್ತಿ ಹಣವನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳಿದ್ದೀರಿ. ಬಿಡುಗಡೆ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆದರೆ ಈವರೆವಿಗೆ ಎಷ್ಟು ಹಣ ಅದಕ್ಕೆ ಖರ್ಚಾಗಿದೆ ಎಂಬ ಬಗ್ಗೆ ಉತ್ತರವನ್ನೇ ಕೊಟ್ಟಿಲ್ಲ. ಸಚಿವರು ಹಾರಿಕೆಯ ಉತ್ತರವನ್ನು ಕೊಡುತ್ತಾರೆ. ನಾನು ನಿರ್ದಿಷ್ಟವಾದ ಉತ್ತರವನ್ನು ಕೇಳುತ್ತೇನೆ. 1991ರಿಂದ ಇಲ್ಲಿಯವರೆಗೆ

ಎಷ್ಟು ಹಣ ಇದಕ್ಕೆ ಖರ್ಚಾಗಿದೆ ಎಂಬ ನಿರ್ದಿಷ್ಟ ಪ್ರಶ್ನೆಯನ್ನು ನಾನು ಕೇಳಬಯಸುತ್ತೇನೆ.

ಶ್ರೀ ಎನ್.ಜಿ.ಹಾಲಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾವು ತಿಳಿಸಿದ್ದೇವೆ. 9 ಕೋಟಿ ರೂಪಾಯಿಗಳನ್ನು ಅಲ್ಲಿಯ ಡೆಪ್ಯುಟಿ ಕಮೀಷನರ್ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಯವರು 1992ರಲ್ಲಿ ಆಯವ್ಯಯದಲ್ಲಿ 35ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಮಂಡಳಿಯನ್ನು ರಚಿಸದೆ ಇದ್ದ ಕಾರಣ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ 1991-92ರಲ್ಲಿ 10 ಕೋಟಿ ರೂಪಾಯಿಗಳು ಆಯವ್ಯಯದಲ್ಲಿತ್ತು. ಆಗಲೂ ಮಂಡಳಿ ರಚನೆಯಾಗಿದ್ದಿಲ್ಲ. ಆದರೂ ಸರಕಾರವು ಹಣವನ್ನು ಬಿಡುಗಡೆ ಮಾಡಿದೆ. 1992-93ರಲ್ಲಿ ಮಾತ್ರ ಮಂಡಳಿ ರಚನೆಯಾಗಿಲ್ಲ ಎಂಬ ಕಾರಣಕ್ಕಾಗಿ ಬಿಡುಗಡೆ ಮಾಡಿಲ್ಲ ಎಂದು ಹೇಳುವುದು ಶುದ್ಧ ಸುಳ್ಳು. ಸರಕಾರದಲ್ಲಿ ಹಣ ಇಲ್ಲ, ಹಣ ಕೊಡಲು ಆಗುವುದಿಲ್ಲ ಎಂದು ಹೇಳಿ. ಮಾನ್ಯ ಮುಖ್ಯಮಂತ್ರಿಯವರು ಕೂಡ ಸದನದಲ್ಲಿಯೇ ಇದ್ದಾರೆ. 1991-92ಕ್ಕೆ ಏನು ಹಣ ಕೊಟ್ಟಿದ್ದೀರಿ ಹಾಗೆಯೇ 1992-93ಕ್ಕೆ 35 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ? ದಯವಿಟ್ಟು ಅದನ್ನು ಹೇಳಬೇಕು. 1992-93ರಲ್ಲಿ 35 ಕೋಟಿ ರೂಪಾಯಿಗಳನ್ನು ದಯವಿಟ್ಟು ಬಿಡುಗಡೆ ಮಾಡುತ್ತೀರಾ? ಮಲೆನಾಡು ಅಭಿವೃದ್ಧಿ ನಿಗಮ ಸ್ಥಾಪನೆ ಆಗದಿದ್ದರೆ ಅದಕ್ಕೆ ಸರಕಾರ ಕಾರಣವೇ ವಿನಹ ಜನರು ಅಲ್ಲ. ದಯವಿಟ್ಟು ತಾವು ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ನಾನು ಪರಿಶೀಲನೆ ಮಾಡುತ್ತೇನೆ. ಅಕಸ್ಮಾತ್ತಾಗಿ ಕೇಳಿದರೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರು ಕೈಲಾಸವನ್ನು ತರುತ್ತೇವೆ ಎಂದೆಲ್ಲಾ ಹೇಳುತ್ತಿದ್ದಾರೆ. ಆದರೆ ಅವರು ಹೇಳತಕ್ಕಂಥ ಮಾತುಗಳು ಸತ್ಯವಲ್ಲ...

ಶ್ರೀ ಎಂ. ವೀರಪ್ಪ ಮೊಯಿಲಿ : ಭೂಲೋಕವನ್ನು ಕೈಲಾಸಕ್ಕೆ ಕಳುಹಿಸಲು ಆಗುವುದಿಲ್ಲ ; ಹಾಗೆಯೇ ಕೈಲಾಸವನ್ನು ಭೂಲೋಕಕ್ಕೆ ತರುವುದಕ್ಕೂ ಆಗುವುದಿಲ್ಲ...

ಅಧ್ಯಕ್ಷರು : ಬನ್ನಿಕೋಡ್ರವರೇ, ತಾವು ಮಾತನಾಡಿದ್ದೀರಿ. ಸಾಕು.. ಈಗ ಮುಂದೂಡಲಾಗಿರುವ ಪ್ರಶ್ನೆಗಳು.

ಮಂಡ್ಯ ನಗರದಲ್ಲಿನ ರಂಗಮಂದಿರ ನಿರ್ಮಾಣ ಕಾರ್ಯಕುರಿತು

65 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ರಂಗಮಂದಿರ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆಯೇ?

ಆ) ಈ ನಿರ್ಮಾಣ ಕಾರ್ಯ ಸ್ಥಗಿತಗೊಳ್ಳಲು ಕಾರಣಗಳೇನು?

ಇ) ಸದರಿ ರಂಗಮಂದಿರ ಕಾರ್ಯವನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ, ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ಸಾರ್ವಜನಿಕ ವಂತಿಕೆ ಕೊರತೆಯಿಂದ ಹಾಗೂ ಆಡಳಿತಾತ್ಮಕ ತೊಂದರೆಯಿಂದ.